ನರೇಂದ್ರ ಪೈ

# ಹಾಡು ಕಳೆದುಕೊಂಡ ಹಕ್ಕಿಗಳ ಕತೆ

ಕರ್ಕಿ ಕೃಷ್ಣಮೂರ್ತಿಯವರ ಹೊಸ ಕಾದಂಬರಿ 'ಚುಕ್ಕಿ ಬೆಳಕಿನ ಜಾಡು' ಈಚೆಗೆ ಬಂದಿರುವ ಒಂದು ಗಮನಾರ್ಹ ಕಾದಂಬರಿ. ಇದರ ನಾಯಕನ ಚಹರೆ ಮೂಡಿಸುತ್ತಲೇ ಒಂದು ದೇಶದ 'ಹೊರಗಿನವರ' ಮತ್ತು 'ಒಳಗಿನವರ' ಪಂಕ್ತಿಭೇದದ ಸಮಸ್ಯೆ ಕಾಣಿಸಲು ಅವರು ಪ್ರಯತ್ನಿಸುತ್ತಾರೆ ಮತ್ತು ಹಾಗೆ ಮಾಡುತ್ತಲೇ ನಮ್ಮದೇ ದೇಶದ ಸಮಾನತೆಯ ಕೂಗನ್ನು ಹೊಸದೇ ಆದ ಒಂದು ನಿಟ್ಟಿನಿಂದ ಮುಖಾಮುಖಿಯಾಗುತ್ತಾರೆ. ಈ ಕಾರಣಕ್ಕೆ ಕರ್ಕಿ ಕೃಷ್ಣಮೂರ್ತಿಯವರ ಈ ಕಾದಂಬರಿ ಮುಖ್ಯವೆನಿಸುತ್ತದೆ.

ಈ ಶತಮಾನದ ಆದಿಯಲ್ಲಿ ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ ಪತನವಾದ ಬಳಿಕ ಜಾಗತಿಕ ವಲಸೆ ಕುರಿತು ಬಂದಿರುವ ಕೃತಿಗಳು ಅಸಂಖ್ಯ. ಇವತ್ತಿಗೂ ಅದು ಮುಂದುವರಿದಿದ್ದು ಪ್ರಖ್ಯಾತ ಇಸಾಬೆಲ್ಲ ಅಯ್ಯೆಂಡೆಯ ಇತ್ತೀಚಿನ ಕಾದಂಬರಿ 'ಅ ಲಾಂಗ್ ಪೆಟಲ್ ಆಫ್ ದ ಸೀ' ಕೂಡ ಜಾಗತಿಕ ಸಮರದ ಹಿನ್ನೆಲೆಯಲ್ಲಿದ್ದೂ ಇಂಥ ವಲಸೆಯ ಕುರಿತಾಗಿಯೇ ಇದೆ. ಕನ್ನಡದಲ್ಲಿ ಎಂ.ಆರ್. ದತ್ತಾತ್ರಿಯವರ 'ದ್ವೀಪವ ಬಯಸಿ', ವಸುಧೇಂದ್ರ ಅವರ 'ತೇಜೋ ತುಂಗಭದ್ರಾ' ಬಿಟ್ಟರೆ ಜಾಗತಿಕ ವಲಸೆಯ ವಸ್ತುವನ್ನಿರಿಸಿಕೊಂಡು ಬಂದ ಕೃತಿಗಳು ಕಡಿಮೆ. ಕರ್ಕಿ ಕೃಷ್ಣಮೂರ್ತಿಯವರ ಕೃತಿ ಎರಡು ಸ್ತರದಲ್ಲಿ ಕೆಲಸ ಮಾಡುತ್ತದೆ. ಒಂದು, ಬೇರೊಂದು ದೇಶದಲ್ಲಿ ನೆಲೆಯಾದವರು ಕ್ರಮೇಣ ಅನುಭವಿಸುವ 'ನಿಮ್ಮೊಡನಿದ್ದೂ ನಿಮ್ಮಂತಾಗದ' ವಿದ್ಯಮಾನದ ಸುತ್ತ. ಇನ್ನೊಂದು, ಮನುಷ್ಯ ಎಲ್ಲಿ ನೆಲೆಯಾಗುತ್ತಾನೋ ಅಲ್ಲಿ, ಒಂದಲ್ಲಾ ಒಂದು ಹಂತದಲ್ಲಿ ಸಮಾನತೆಯನ್ನು ಬಯಸುತ್ತಾನೆ ಮತ್ತು ಅದು ಸುಲಭಸಾಧ್ಯ ವಸ್ತು ಅಲ್ಲ ಎನಿಸಿದಾಗ ಅದಕ್ಕಾಗಿ ಹೋರಾಡುತ್ತಾನೆ ಎನ್ನುವುದರ ಸುತ್ತ. ಇದೊಂದು ಇನ್‌ಸೈಡರ್–ಔಟ್‌ಸೈಡರ್ ಪ್ರಕ್ರಿಯೆ.

> ‘ಈ ಕೃತಿಯ ಮುದ್ದೆಯಿರುವುದು ಮನುಷ್ಯನ ವಿಸ್ಮೃತಿಗೆ ಗುರಿಯಾಗಿರುವ ಮನುಕುಲದ ಹಾಡೇ.